ಇ) ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಪ್ರಕಾರ ಜಿಲ್ಲಾ ಪಂಚಾಯತಿಗೆ ಒದಗಿಸಲಾದ ಅನುದಾನಕ್ಕನುಗುಣವಾಗಿ ತುರ್ತು ಮತ್ತು ಅಗತ್ಯವಿರುವ ರಸ್ತೆ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಜಿಲ್ಲಾ ಪಂಚಾಯತಿಗಳು ತಯಾರಿಸಿ ಸಾಮಾನ್ಯ ಸ್ಥಾಯಿ ಸಮಿತಿ ಅನುಮೋದನೆ ಪಡೆಯಲಾಗುತ್ತಿದ್ದು, ನಿಯಮಾನುಸಾರ ಕಾಮಗಾರಿಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ.

ಶ್ರೀ ಸಿದ್ದು ಸಾವದಿ (ಜಮಖಂಡಿ)147(318)

ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ ವೈಯಕ್ತಿಕವಾಗಿ ಕಟ್ಟಿಸಿಕೊಂಡ ಶೌಚಾಲಯಗಳ ಸಂಖ್ಯೆ ಎಷ್ಟು ಮತ್ತು ಅವುಗಳಿಗೆ ಒದಗಿಸುವ ಸಹಾಯಧನ ಎಷ್ಟು;

ಆ) ಸಹಾಯಧನ ಪಡೆದ ಎಲ್ಲಾ ಶೌಚಾಲಯಗಳನ್ನು ಉಪಯೋಗಿ ಸುತ್ತಾರೆಯೇ ಇಲ್ಲವಾದಲ್ಲಿ ಕಾರಣಗಳೇನು;

ಇ) ಕೇವಲ ರೂ.1200/– ಹಣದ ಸಹಾಯಧನದಲ್ಲಿ ಅಷ್ಟೊಂದು ಜನಾಕರ್ಷಣೆ ಇಲ್ಲದಿರುವುದರಿಂದ ಪೂರ್ಣವಾಗಿ ಸರ್ಕಾರವೇ ಮನೆ ಗೊಂದು ಶೌಚಾಲಯವನ್ನು ಏಕೆ ಕಟ್ಟಿಸಿಕೊಡಬಾರದು.

ಈ) ಕನಿಷ್ಟ ಪಕ್ಷ ಬಡತನ ರೇಖೆಗಿಂತ ಕೆಳಗಿರುವ ಬಡವರಿಗಾದರೂ ಉಚಿತವಾಗಿ ವೈಯಕ್ತಿಕ ಶೌಚಾಲಯಗಳನ್ನು ಕಟ್ಟಿಸಿಕೊಡುವ ಯೋಚನೆ ಇದೆಯೇ. ಇಲ್ಲವಾದಲ್ಲಿ ಕಾರಣಗಳನ್ನು ತಿಳಿಸುವುದು.

ಶ್ರೀ ಎಸ್.ಎ. ರವೀಂದ್ರನಾಥ್

ಅ) ರಾಜ್ಯದಲ್ಲಿ ಈವರೆಗೆ ಸಂಪೂರ್ಣ ಸ್ವಚ್ಛತಾ ಆಂದೋಲನ ದಡಿಯಲ್ಲಿ 752228 ಕುಟುಂಬಗಳು ಶೌಚಾಲಯವನ್ನು ನಿರ್ಮಿಸಿಕೊಂಡು

ಬಳಕೆ ಮಾಡತೊಡಗಿದರೆ ಮಾತ್ರ ರೂ.1200/- (ಸಾವಿರದ ಎರಡು ನೂರು ರೂಪಾಯಿಗಳು) ಗಳನ್ನು ಸಹಾಯಧನವಾಗಿ ನೀಡಲಾಗುತ್ತಿದೆ.

ಆ) ಸಂಪೂರ್ಣ ಸ್ವಚ್ಛತಾ ಆಂದೋಲನದಡಿಯಲ್ಲಿ ನಿರ್ಮಾಣಗೊಂಡು ಸಹಾಯಧನ ಪಡೆದ ಕುಟುಂಬಗಳಲ್ಲಿನ ಎಲ್ಲಾ ಶೌಚಾಲಯಗಳು ಬಳಕೆಯಲ್ಲಿವೆ.

ಇ) ಜನರ ಬೇಡಿಕೆಯನ್ನು ಕೇಂದ್ರವಾಗಿಟ್ಟುಕೊಂಡು ಸಮುದಾಯದ ನೇತೃತ್ವದೊಂದಿಗೆ ಶೌಚಾಲಯ ನಿರ್ಮಾಣ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸುವುದು ಹಾಗೂ ಸಮುದಾಯವು ಪೂರ್ಣವಾಗಿ ಭಾಗವಹಿಸುವಂತೆ ಉತ್ತೇಜಿಸುವುದು ಸಂಪೂರ್ಣ ಸ್ವಚ್ಛತಾ ಆಂದೋಲನದ ಮುಖ್ಯ ಉದ್ದೇಶ ವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಗ್ರಾಮೀಣ ಜನರಿಗೆ ಅವಶ್ಯವಿರುವ ಶೌಚಾಲಯಗಳನ್ನು ತಾವೇ ಸ್ವತಃ ನಿರ್ಮಿಸಿಕೊಳ್ಳುವಂತೆ ಮಾಡಲು ಮಾಹಿತಿ, ಶಿಕ್ಷಣ, ಸಂವಹನ ಕಾರ್ಯಕ್ರಮಗಳ ಮೂಲಕ ಉತ್ತೇಜಿಸಲಾಗುತ್ತಿದೆ.

ಈ) ಇಲ್ಲ.

ಸಂಪೂರ್ಣ ಸ್ವಚ್ಛತಾ ಆಂದೋಲನವು ಬೇಡಿಕೆಯಾದಾರಿತ ಕಾರ್ಯಕ್ರಮ ವಾಗಿದ್ದು, ಸಮುದಾಯದ ನೇತೃತ್ವ ಹಾಗೂ ಭಾಗವಹಿ ಸುವಿಕೆಗಳ ಮೂಲಕ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು ಮುಖ್ಯ ಉದ್ದೇಶವಾಗಿರುತ್ತದೆ.